ವಿಷಯ: : ಭೂಚೇತನ ಯೋಜನೆಯ ಮೌಲ್ಯಮಾಪನವನ್ನು ಬಾಹ್ಯ ಸಂಸ್ಥೆಯಿಂದ ಮಾಡಿಸುವ ಬಗ್ಗೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/102/ಕೃಇಕ/2012, ಬೆಂಗಳೂರು, ದಿ: 01-09-2012.**

ಓದಲಾಗಿದೆ: ಕೃಷಿ ನಿರ್ದೇಶಕರ ಪತ್ರ ಸಂ: ಉಕೃನಿ(ಆ.ಬೆ)/ಭೂಚೇತನ/ ಬಾ.ಮೌ/ 2012-13, ದಿ: 18-06-2012.

**ಪ್ರಸ್ತಾವನೆ:**

ರಾಜ್ಯದ ಒಟ್ಟು ಸಾಗುವಳಿ ಪ್ರದೇಶದಲ್ಲಿ ಸುಮಾರು ಶೇ.70ರಷ್ಟು ಖುಷ್ಕಿ ಪ್ರದೇಶವಾಗಿದೆ. ಖುಷ್ಕಿ ಬೇಸಾಯದಲ್ಲಿ ಇಂದಿನ ಇಳುವರಿ ಮಟ್ಟವು ಇಳುವರಿ ಸಾಮರ್ಥ್ಯಕ್ಕಿಂತ ಕಡಿಮೆ ಇರುವುದು ಸಂಶೋಧನೆಗಳಿಂದ ತಿಳಿದುಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಖುಷ್ಕಿ ಪ್ರದೇಶದ ಬೆಳೆ ಇಳುವರಿ ಹೆಚ್ಚಿಸುವುದರೊಂದಿಗೆ ರೈತರ ಜೀವನ ಮಟ್ಟ ಹಾಗೂ ರೈತರ ಆರ್ಥಿಕ ಮಟ್ಟವನ್ನು ಉತ್ತಮಗೊಳಿಸಲು **"ಭೂಚೇತನ"** ಎಂಬ ವಿಶಿಷ್ಟ ಯೋಜನೆಯನ್ನು 2009-10 ರಿಂದ 2013-14 ನೇ ಸಾಲಿನವರೆಗೆ ಹಮ್ಮಿಕೊಂಡಿದೆ. ಈ ಯೋಜನೆಯನ್ನು ಕೃಷಿ ಇಲಾಖೆಯು ಇಕ್ರಿಸ್ಯಾಟ್ ಸಂಸ್ಥೆ, ಹೈದ್ರಾಬಾದ್, ಜಲಾನಯನ ಅಭಿವೃದ್ಧಿ ಇಲಾಖೆ ಹಾಗೂ ಕೃಷಿ ವಿಶ್ವವಿದ್ಯಾನಿಲಯಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸುತ್ತಿದೆ.

ದಿನಾಂಕ: 17-06-2011 ರಂದು ಕೃಷಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ರವರ ಅಧ್ಯಕ್ಷತೆಯಲ್ಲಿ ಮೇ-2011ರ ಮಾಹೆಯ ಪ್ರಗತಿಗೆ ಸಂಬಂಧಿಸಿದಂತೆ ನಡೆದ ಎಂ.ಎಂ.ಆರ್ ಸಭೆಯಲ್ಲಿ ಸರ್ಕಾರದ ಕಾರ್ಯದರ್ಶಿ ರವರು ಕೃಷಿ ಇಲಾಖೆಯ ಪ್ರಮುಖ ಯೋಜನೆಗಳಾದ ಭೂಚೇತನ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಇತ್ಯಾದಿ ಪ್ರಮುಖ ಯೋಜನೆಗಳಡಿಯಲ್ಲಿ ಮೌಲ್ಯಮಾಪನ ಮಾಡದೆ ಇರುವುದನ್ನು ಗಮನಿಸಿ, ಇದರಿಂದಾಗಿ ಯೋಜನೆಯ ಫಲಶ್ರುತಿ ಸರಿಯಾಗಿ ಆಗಿದೆಯೊ ಇಲ್ಲವೇ ಎಂಬುದರ ಬಗ್ಗೆ ಸರ್ಕಾರಕ್ಕೆ ಯಾವುದೇ ವೈಜ್ಞಾನಿಕವಾಗಿ ಮಾಹಿತಿ ಇಲ್ಲದೇ ಇರುವುದರಿಂದ ಎಲ್ಲಾ ಪ್ರಮುಖ ಯೋಜನೆಗಳಡಿಯಲ್ಲ Concurrernt and Monitoring Evaluation ಕಡ್ಡಾಯವಾಗಿ ಕೈಗೊಳ್ಳುವಂತೆ ಎಲ್ಲಾ ಇಲಾಖಾ ಮುಖ್ಯಸ್ಥರಿಗೆ ಸೂಚಿಸಿರುತ್ತಾರೆ. ಇದರಂತೆ ಭೂಚೇತನ ಯೋಜನೆಯ ಮೌಲ್ಯಮಾಪನಕ್ಕಾಗಿ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿ "NABARD Consultancy Services" ರವರನ್ನು ಮೌಲ್ಯಮಾಪನ ಕಾರ್ಯಕ್ಕಾಗಿ ಆಯ್ಕೆ ಮಾಡಲಾಗಿದೆ.

ಕೃಷಿ ಇಲಾಖೆಗೆ ಆರ್.ಕೆ.ವಿ.ವೈನ ಆಡಳಿತ ವೆಚ್ಚ ರೂ.8.20 ಕೋಟಿ ಲಭ್ಯವಿದ್ದು, ಸದರಿ ಅನುದಾನದಲ್ಲಿ ಭೂಚೇತನ ಯೋಜನೆಯ ಮೌಲ್ಯಮಾಪನ ವೆಚ್ಚ ರೂ.68,76,500.00 ಗಳನ್ನು ಭರಿಸಲಾಗುವುದು ಎಂದು ತಿಳಿಸುತ್ತಾ, ಸದರಿ ಮೌಲ್ಯಮಾಪನ ಕಾರ್ಯಕ್ಕಾಗಿ ಕಾರ್ಯದೇಶ ನೀಡಲು ಕೃಷಿ ಆಯುಕ್ತರಿಗೆ ಆರ್ಥಿಕ ಅಧಿಕಾರವಿರುವುದಿಲ್ಲವಾದ್ದರಿಂದ ಸರ್ಕಾರದ ಮಂಜೂರಾತಿ ಆದೇಶ ಹೊರಡಿಸಬೇಕೆಂದು ಮೇಲೆ ಓದಲಾದ ಪತ್ರದಲ್ಲಿ ಕೃಷಿ ನಿರ್ದೇಶಕರು ಕೋರಿದ್ದಾರೆ.

ಆದ್ದರಿಂದ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಅದಕ್ಕಾಗಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, 2012-13ನೇ ಸಾಲಿಗೆ ಆರ್.ಕೆ.ವಿ.ವೈ ಲೆಕ್ಕ ಶೀರ್ಷಿಕೆ: 2401-00-800-1-57 ಅಡಿ ಒದಗಿಸಿರುವ ರೂ.15,700.00 ಲಕ್ಷಗಳಲ್ಲಿ, ಮಾರ್ಗಸೂಚಿಯನ್ವಯ ಶೇ.1 ರಷ್ಟು ಮೊತ್ತ ರೂ.157.00 ಲಕ್ಷಗಳನ್ನು ಆಡಳಿತ ವೆಚ್ಚವನ್ನಾಗಿ ಭರಿಸಲು ಅವಕಾಶವಿರುತ್ತದೆ.

ಭೂಚೇತನ ಯೋಜನೆಗೆ ಆರ್.ಕೆ.ವಿ.ವೈ, ಅಡಿ 2009-10 ರಿಂದ 2011-12ನೇ ಸಾಲಿನವರೆಗೆ ಒದಗಿಸಿರುವ ರೂ.83.3 ಕೋಟಿಗಳಲ್ಲಿ 2012-13ನೇ ಸಾಲಿಗೆ ಕೃಷಿ ಇಲಾಖೆಗೆ ರೂ.8.20 ಕೋಟಿ ಆಡಳಿತ ವೆಚ್ಚ ಲಭ್ಯವಿರುವುದಾಗಿ ತಿಳಿಸಿರುವ ಹಿನ್ನಲೆಯಲ್ಲಿ NABARD Consultancy Services (P) Ltd ಇವರಿಗೆ ರೂ.68,76,500.00 (ಅರವತ್ತೆಂಟು ಲಕ್ಷ ಎಪ್ಪತ್ತಾರು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) - ಗಳನ್ನು "ಭೂಚೇತನ" ಯೋಜನೆಯ ಬಾಹ್ಯ ಮೌಲ್ಯಮಾಪನ ವೆಚ್ಚವನ್ನಾಗಿ ಭರಿಸಲು ಸರ್ಕಾರವು ಈ ಮೂಲಕ ಮಂಜೂರಾತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂ:ಕೃಇ/147/ಆಂಆಸ/2012, ದಿ: 25-07-2012 ರಲ್ಲಿ ನೀಡಿರುವ ಸಹಮತಿ ಹಾಗೂ ದಿ:27-04-2012ರ ಆದೇಶ ಸಂ:ಎಫ್‌ಡಿ/ಟಿಎಫ್‌ಪಿ/2012 ರಲ್ಲಿ ಪ್ರದತ್ತವಾಗಿರುವ ಅಧಿಕಾರದ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜೆ. ಆರ್. ವಿಶ್ವನಾಥಾಚಾರ್). 3/9
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).
(ದೂರವಾಣಿ ಸಂ:080 2203 2388)

<u>ಇವರಿಗೆ:-</u>

1. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
4. ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು/ಧಾರವಾಡ/ರಾಯಚೂರು.
5. ವಿಶೇಷಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ಶಿವಮೊಗ್ಗ.
6. ನಿರ್ದೇಶಕರು, ಖಜಾನೆ ಇಲಾಖೆ(SHT), ಬೆಂಗಳೂರು.
7. ನಿರ್ದೇಶಕರು, ಮೌಲ್ಯಮಾಪನ ವಿಭಾಗ, ಯೋಜನಾ ಇಲಾಖೆ.
8. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿ, ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ.
10. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-4 ಮತ್ತು 5), ಆರ್ಥಿಕ ಇಲಾಖೆ.
11. ಶಾಖಾಧಿಕಾರಿ, ಕೃಷಿ -ಬಿ, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಪ್ರತಿಯನ್ನು ಮಾಹಿತಿಗಾಗಿ:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ.
2. ಸರ್ಕಾರದ ಉಪ ಕಾರ್ಯದರ್ಶಿ ರವರ ಆಪ್ತ ಸಹಾಯಕ, ಕೃಷಿ ಇಲಾಖೆ.